ದಿನಾಂಕ 18.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಶ್ರೀ.ಎಸ್.ಆರ್.ಜೆ. ವಕೀಲರಿಂದಃ-**

ನನ್ನನ್ನು ಪ್ರಮೋದ್ ಎಂತಲೂ ಕರೆಯುತ್ತಾರೆ. ಪ್ರತಿವಾದಿಯು ದಾವಾ ಸ್ವತ್ತನ್ನು ಒತ್ತುವರಿ ಮಾಡಿದ್ದು, ಅದನ್ನು ತೆರವುಗೊಳಿಸುವಂತೆ ಕೋರಿ ದಾವೆಯನ್ನು ಹೂಡಿರುತ್ತೇನೆ. ದಾವಾ ಸ್ವತ್ತು ನನ್ನ ಅಜ್ಜನಿಗೆ ಮೌಖಿಕ ವಿಭಾಗ ಮೂಲಕ ಬಂದಿರುತ್ತದೆ. ನನ್ನ ಅಜ್ಜನಿಗೆ ಎ.ಪಿ. ತಿಮ್ಮಯ್ಯ, ಎ.ಪಿ. ಚಂಗಪ್ಪ, ಎ.ಪಿ. ಮಂದಣ್ಣ ಮತ್ತು ಯಶೋಧ ಎಂಬ ನಾಲ್ಕು ಜನ ಮಕ್ಕಳು. ನನ್ನ ತಂದೆ ಮತ್ತು ಅವರ ಸಹೋದರರ ನಡುವೆ ಮೌಖಿಕ ವಿಭಾಗವು ಯಾವ ವರ್ಷ ಆಗಿರುತ್ತದೆ ಎಂಬುದು ನನಗೀಗ ನೆನಪಿಲ್ಲ. ನನ್ನ ತಂದೆಗೆ ಮೌಖಿಕ ವಿಭಾಗದ ಮೂಲಕ ಯಾವ ಸರ್ವೆ ನಂಬರ ಗಳಲ್ಲಿ ಎಷ್ಟು ಆಸ್ತಿ ಬಂದಿದೆ ಎಂಬ ಬಗ್ಗೆ ನೋಂದಾಯಿತ ದಾಖಲೆಗಳು ಇರುವುದಿಲ್ಲ. ದಾವಾ ಸ್ವತ್ತು ವಿಭಾಗದ ಮೂಲಕ ನನ್ನ ತಂದೆಯ ಹಿಸ್ಸೆಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ವಂಶವೃಕ್ಷವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಶಾನೆ ಪಿ. 2 ರ ಕಲಂ ನಂ.12 ರಲ್ಲಿ ನನ್ನ ತಂದೆಯ ಹೆಸರಿನೊಂದಿಗೆ ನನ್ನ ಚಿಕ್ಕಪ್ಪನಾದ ಮಂದಣ್ಣರವರ ಹೆಸರು ಸಹ ಇದೆ. ನನ್ನ ಚಿಕ್ಕಪ್ಪನಿಗೂ ಸಹ ದಾವಾ ಸ್ವತ್ತಿನಲ್ಕಿ ಹಕ್ಕು ಇದೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.